ಬಗ್ಗೆ ಜಾಸ್ತಿ ತಿಳಿಯಲು ಮತ್ತು ನೋಡಲು ಭಾರೀ ಆಕರ್ಷಣೆಗೆ ಒಳಗಾಗುತ್ತಾರೆ. ಆಗ ಅಲ್ಲಿ ಒಂದು ಹೊಸ ಬಿಸಿನೆಸ್ ಸೃಷ್ಟಿಯಾಗುತ್ತದೆ. ಆ ಊರಿನವರು ತಮ್ಮ ಊರಿನ ವೈಶಿಷ್ಟ್ಯವನ್ನು ಪ್ರದರ್ಶಿಸಿ ಹಣ ಮಾಡುತ್ತಾರೆ. ಹೊರಗಿನವರಿಗೆ ಇದು ಒಂದು ಹೊಸ ಅನುಭವ. ಒಟ್ಟಿನಲ್ಲಿ ನಾನು ಹೋದಲ್ಲಿ ಬಹಳ ಅಭಿವೃದ್ಧಿಯಾಗ್ತದೆ' ಅಂದ.

'ಅಲ್ಲ ಕಾರಂತರೇ, ಇದೆಲ್ಲ ಅಷ್ಟು ಸುಲಭವಾಗಿದ್ರೆ ಎಲ್ಲಾ ಊರು ಅಭಿವೃದ್ಧಿಯಾಗ್ತಿತ್ತಲ್ಲ?' ಶೆಟ್ರು ಸವಾಲು ಎಸೆದರು.

'ಶೆಟ್ರೇ, ನನಗಿದು ಮೂರನೇ ಅನುಭವ, ಮೊದಲಿಗೆ ನಾನು ದಕ್ಷಿಣ ಅಮೇರಿಕಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ಹಿಮಾಲಯದ ಹಾಗೆ ಬಹಳ ದೊಡ್ಡ ಪರ್ವತಶ್ರೇಣಿ 'ಆಂಡೆಸ್' ಇದೆ. ನಾನು ಬ್ರೆಜಿಲ್ ದೇಶದ ಆಂಡೆಸ್ ತಪ್ಪಲಿನ ಒಂದು ಅಮೆಜಾನ್ ಕಾಡುಗಳೊಳಗಿನ ಹಳ್ಳಿಯೊಂದಕ್ಕೆ ಹೋಗಿದ್ದೆ. ಆ ಹಳ್ಳಿಯವರಿಗೆ ಊಟಕ್ಕೂ ಕಷ್ಟವಿತ್ತು.

ಜನರಿಗೆ ಸರಿಯಾದ ಶಿಕ್ಷಣ ಇರಲಿಲ್ಲ. ಇದು ನನ್ನ ಜೀವನದ ದೊಡ್ಡ ಸವಾಲಾಗಿತ್ತು. ಯಾವುದೇ ದೊಡ್ಡ ಬಂಡವಾಳ ಇಲ್ಲದೆ, ಯಾರ ಪರಿಚಯವೂ ಇಲ್ಲದೆ ಕೇವಲ ಒಬ್ಬ ವ್ಯಕ್ತಿ ಬರೇ ಆರು ತಿಂಗಳಲ್ಲಿ ಒಂದು ಹಳ್ಳಿಯನ್ನೂ ಅಲ್ಲಿರುವ ಜನರನ್ನೂ ಪರಿವರ್ತನೆ ಮಾಡಿದ ಉದಾಹರಣೆ ಜಗತ್ತಿನಲ್ಲೇ ಪ್ರಥಮ. ನನ್ನ ಕೈಯಲ್ಲಿದ್ದ ಒಂದೇ ಅಸ್ತ್ರ ಅಂದರೆ ಇಂಟರ್ನೆಟ್.

ಈಗ ಆ ಹಳ್ಳಿ ಇಡೀ ಜಗತ್ತಿಗೇ ಪ್ರಸಿದ್ಧ. ಅದಾದ ನಂತರ ನಾನು ನನ್ನ ಎರಡನೇ ಪ್ರವಾಸದಲ್ಲಿ ಆಫ್ರಿಕಾಕ್ಕೆ ಹೋಗಿದ್ದೆ. ಪ್ರತೀ ಸರ್ತಿ ನನ್ನ ಪ್ರವಾಸಗಳನ್ನು ದೊಡ್ಡ ಕಂಪನಿಗಳು 'ಸ್ಪಾನ್ಸರ್' ಮಾಡುತ್ತವೆ. ನನ್ನ ಸೋಶಿಯಲ್ ಮೀಡಿಯಾ ಪೋಸ್ಟ್‌ಗಳನ್ನು ಲಕ್ಷಾಂತರ ಜನ ನೋಡುತ್ತಾರೆ. ಹಾಗಾಗಿ ಕಂಪನಿಗಳು ನನಗೆ ಹೀಗೆ ಪ್ರವಾಸಕ್ಕೆ ದುಡ್ಡು ಕೊಡುತ್ತವೆ. ನಾನು ಹಳ್ಳಿಯಲ್ಲಿ ದಿನವೂ ಏನು ಮಾಡುತ್ತೇನೆ ಅಂತ ಸೋಶಿಯಲ್ ಮೀಡಿಯಾದಲ್ಲಿ ಪ್ರಕಟ ಮಾಡ್ತೇನೆ. ನನ್ನನ್ನು ಹಿಂಬಾಲಿಸುವವರಿಗೆ ಇದು ಒಂದು ಬಹಳ ದೊಡ್ಡ ರಿಯಾಲಿಟಿ ಶೋ. ನಾನು ಆಫ್ರಿಕಾದಲ್ಲಿ ಯಶಸ್ಸು ಪಡೆದ ಮೇಲೆ ಈಗ ನನ್ನ ಹೊಸ ಪ್ರಯಾಣ ಸೀತಾಪುರಕ್ಕೆ – ನನ್ನ ಅಪ್ಪನ ಊರಿಗೆ' ಅಂದ.

'ಹಾಗಾದರೆ ನೀವು ಸೀತಾಪುರಕ್ಕೆ ಮದ್ದಿಗಾಗಿ ಬಂದಿಲ್ಲ...?' ಆನಂದಣ್ಣನಿಗೆ ಇದು ದೊಡ್ಡ ಪತ್ತೇದಾರಿ ಕಾದಂಬರಿಯ ಹಾಗೆ ಕಂಡಿತು.

'ಹಾಗೇನಿಲ್ಲ, ಭಾರತ, ಅದೂ ಸೀತಾಪುರ ನನಗೆ ಬಹಳ ಹತ್ತಿರದ್ದು. ಅದಕ್ಕೆ ಸರಿಯಾಗಿ ನನಗೆ **Herpes zoster** ಆಗಿತ್ತು. ನನ್ನ ಅಪ್ಪನ ಕಥೆಗಳಿಂದ ಶಾಸ್ತ್ರಿಗಳ ಬಗ್ಗೆ ಕೇಳಿಕೊಂಡಿದ್ದೆ. ಇದೆಲ್ಲಾ ಕೂಡಿಬಂತು. ನಿಮ್ಮನ್ನೆಲ್ಲಾ ನೋಡುವ ಹಾಗಾಯ್ತು. **Herpes zoster** ಕೂಡ ಗುಣ ಆಯ್ತು. ಶಾಸ್ತ್ರಿಗಳು ಸ್ವಲ್ಪ ಸಮಯ ಇಲ್ಲಿದ್ದು ನೋಡ್ಲಿಕ್ಕೆ ಹೇಳಿದ್ದಾರೆ.

ನನಗೆ ಅದು ಸರಿ ಕಂಡಿದೆ. ನಾನು ಇದನ್ನು ನನ್ನ ಅಮೇರಿಕದ ಬಾಸ್‌ಗೆ ಹೇಳಿದಾಗ ಅವರು ಈ ಐಡಿಯಾ ಕೊಟ್ಟರು. ಹೇಗೂ ನಾನು ಸೀತಾಪುರದಲ್ಲಿದ್ದೇನೆ. ಇನ್ನೆರಡು ತಿಂಗಳಲ್ಲಿ ಸೀತಾಪುರವನ್ನು ಅಭಿವೃದ್ಧಿ ಮಾಡುವ ಚಾನ್ಸ್ ನನಗಿದೆ. ಅದಕ್ಕೆ ನನ್ನ ಬಾಸ್ ಒಪ್ಪಿಗೆ ಮತ್ತು ಸ್ಪಾನ್ಸರ್ಸ್ ಈಗಾಗಲೇ ಸಿಕ್ಕಿದ್ದಾರೆ' ಅಂದ ಸಂಜಯ್.

ಶೆಟ್ಟರು ಎಳನೀರು ತರಿಸಿದರು.

ಎಲ್ಲರೂ ಎಳನೀರು ಕುಡಿದ ಮೇಲೆ ಶೆಟ್ಟರು ಸಂಜಯನನ್ನು ಕರೆದುಕೊಂಡು ತೋಟಕ್ಕೆ ಆನಂದಣ್ಣನ ಜೊತೆ ಹೊರಟರು. ದಾರಿಯಲ್ಲಿ ಮಾತುಕತೆ ಮುಂದುವರಿದಿತ್ತು.

'ನೀವು ಹೇಳುವುದು ಅದ್ಭುತವಾಗಿ ಕಾಣ್ತದೆ ಕಾರಂತರೇ, ಆದ್ರೆ ಈಗ ನಾನೇನು ಮಾಡ್ಬೇಕು?' ಶೆಟ್ಟರು ಕೇಳಿದರು.

'ಅದು ಸುಲಭ ಶೆಟ್ರೇ, ಮೊದಲಿಗೆ ಸೀತಾಪುರದಲ್ಲಿ ಏನೇನು ವೈಶಿಷ್ಟ್ಯ ಇದೆ ಅಂತ ನಾವು ನೋಡ್ಬೇಕು. ನಂತರ ನನಗೆ ಸೀತಾಪುರಕ್ಕೆ ಇಂಟರ್ನೆಟ್ ತರಲು ನಿಮ್ಮ ಸಹಾಯ ಬೇಕು. ಸೀತಾಪುರಕ್ಕೆ ಒಂದು ಹೋಗಲು ಕೊನೆಯ ಪಕ್ಷ ಒಂದು ಕಾಲುದಾರಿಯಾದರೂ ಮಾಡಬೇಕು' ಅಂದ ಸಂಜಯ್.

'ವೈಶಿಷ್ಟ್ಯ ನಮ್ಮೂರಲ್ಲಿ ಏನಿದೆ ಮಣ್ಣು?' ಅಂದರು ಆನಂದಣ್ಣ.

ಸಂಜಯ್ ನಗುತ್ತಾ 'ಒಮ್ಮೊಮ್ಮೆ ಮಣ್ಣೇ ವಿಶಿಷ್ಟವಾಗುತ್ತೆ ಆನಂದಣ್ಣ! ಬ್ರೆಜಿಲ್‌ನಲ್ಲಿ ನಾನಿದ್ದ ಹಳ್ಳಿಯಲ್ಲಿ ಒಂದು ಗುಡ್ಡ ಇತ್ತು. ಅಲ್ಲಿ ಬಣ್ಣ ಬಣ್ಣದ ಮಣ್ಣು ಸಿಗುತ್ತಿತ್ತು. ಅದೆಲ್ಲಾ ಜ್ವಾಲಾಮುಖಿಯಿಂದ ಸೃಷ್ಟಿಯಾದ ಗುಡ್ಡಗಳು. ಬೇರೆಬೇರೆ ಖನಿಜಾಂಶದಿಂದಾಗಿ ಮಣ್ಣಿಗೆ ಬೇರೆಬೇರೆ ಬಣ್ಣ ಬಂದಿತ್ತು. ನಾವು ಈ ಮಣ್ಣನ್ನು **decorative soil** ಅಂತ ಹೇಳಿ ಮಾರಲು ಶುರುಮಾಡಿದೆವು' ಅಂದ.

'ಇದನ್ನೆಲ್ಲಾ ತೆಗೆದುಕೊಳ್ಳುವವರು ಇದ್ದಾರೆಯೇ?' ಕೇಳಿದರು ಶೆಟ್ಟರು.

'ನೋಡಿ, ಈ ಇಂಟರ್ನೆಟ್ ಇದೆಯಲ್ಲಾ, ಇಡೀ ಜಗತ್ತನ್ನೇ ಒಂದು ಸಣ್ಣ ಗ್ರಾಮ ಮಾಡಿಬಿಟ್ಟಿದೆ. ಜನಕ್ಕೆ ಜಗತ್ತಿನ ವಿಚಿತ್ರ ವಸ್ತುಗಳು ಬೇಕು. ಹಾಗಾಗಿ ಯಾವ ವಸ್ತುವೂ ಇಂಟರ್ನೆಟ್‌ನಲ್ಲಿ ಮಾರಾಟವಾಗ್ತದೆ' ಅಂದ ಸಂಜಯ್.

'ನಮ್ಮೂರಲ್ಲಿ ಅಂತಹ ಬಣ್ಣದ ಗುಡ್ಡ ಇಲ್ವಲ್ಲ' ಶೆಟ್ಟರು ಹೇಳಿದರು.

'ಶೆಟ್ರೇ, ಇದಕ್ಕೆ ಗುಡ್ಡ ಬೇಕಾಗಿಲ್ಲ. ಊರಿನ ವಿಶೇಷ ವಸ್ತುವನ್ನು ಗುರುತಿಸುವ ಕಣ್ಣು ಬೇಕು. ಅದನ್ನು ಮಾರಾಟ ಮಾಡುವ ಜಾಣ್ಮೆ ಬೇಕು. ಅದರ ಸುತ್ತ ಒಂದು ಕಥೆಯನ್ನು ಸೃಷ್ಟಿಮಾಡುವ ಸಾಮರ್ಥ್ಯ ಬೇಕು ಅಷ್ಟೇ' ಸಂಜಯ್ ಮುಂದುವರಿಸಿದ.

'ಒಂದು ಮಾಡೋಣ, ನಿಮ್ಮ ಜೊತೆ ನಾನು ಪೂರ್ತಿ ಸೀತಾಪುರ ನೋಡ್ತೇನೆ. ನಮ್ಮೂರಲ್ಲಿರುವ ವಿಶೇಷ ನಾನು ಗುರುತಿಸುತ್ತೇನೆ' ಅಂದ.

ಶೆಟ್ಟರಿಗೆ ಇದು ಸರಿ ಕಂಡಿತು. ಅವರಿಗೆ ಹೊಸ ಯೌವನ ಬಂದಿತ್ತು. ಆನಂದಣ್ಣನೂ ಜೊತೆಗೇ ಬರುವುದಾಗಿ ಹೇಳಿದರು. ಅವರಲ್ಲಿ ಹೊಸ ಹುರುಪು ಬಂದಿತ್ತು.

ನಾಲ್ಕು

ಮರುದಿನ ಸಂಜಯ್ ತನ್ನ ಉಪಾಹಾರ ಮುಗಿಸುವ ವೇಳೆಗೆ ಆನಂದಣ್ಣ ಹಾಜರಾಗಿದ್ದರು. ಬಿಳಿ ವೇಸ್ಟಿ, ಬಿಳಿ ಜುಬ್ಬ ಹಾಗೂ ಹೆಗಲಲ್ಲೊಂದು ಶಾಲು ಹಾಕಿಕೊಂಡು ಅವರು ಇಡೀ ದಿನದ ಪ್ರವಾಸಕ್ಕೆ ಸಿದ್ಧರಾಗಿ ಬಂದಿದ್ದರು.

'ಶಾಸ್ತ್ರಿಗಳೇ, ನಮ್ಮ ಕಾರಂತರಿಗೆ ಇಡೀ ಸೀತಾಪುರ ತೋರಿಸುವ ಅಂತ ಬಂದೆ' ಅಂದರು ಆನಂದಣ್ಣ.

ಶಾಸ್ತ್ರಿಗಳಿಗೆ ಸ್ವಲ್ಪ ಆಶ್ಚರ್ಯ ಆಯಿತು. ಈ ಎರಡು ದಿನಗಳ ಹಿಂದೆ ಆನಂದಣ್ಣನಲ್ಲಿ ಸಂಜಯನ ಬಗ್ಗೆ ಅಷ್ಟು ಉತ್ಸಾಹ ಇರಲಿಲ್ಲ. ಈಗ ಹೀಗೆ ಯಾಕೆ ಉತ್ಸಾಹ? ಆದರೂ ನನಗೇನಾಗಬೇಕು ಅಂದುಕೊಂಡರು.

ಸಂಜಯ್ ಹೊರಟ. ಹೊರಗೆ ಹೋಗುವಾಗ ಸೀತಮ್ಮನ ಕಡೆಗೆ ತಿರುಗಿ, 'ಅಮ್ಮ, ನಾನು ಇವತ್ತು ಮಧ್ಯಾಹ್ನ ಊಟಕ್ಕೆ ಬಾರದಿರಬಹುದು... ಇಡೀ ಊರು ತಿರುಗುತ್ತೇನೆ' ಅಂದ.

'ಸ್ವಲ್ಪ ಲೇಟ್ ಆದರೂ ತೊಂದ್ರೆ ಇಲ್ಲ. ಮನೆಗೇ ಬಾ' ಅಂದರು ಸೀತಮ್ಮ.

ಸಂಜಯ್ 'ಹ್ಞೂಂ' ಅಂದ.

ಹೊರಗೆ ಬಂದವರೇ ಮೊದಲಿಗೆ ಇಬ್ಬರೂ ಶೆಟ್ಟರ ಮನೆಗೆ ಹೋದರು. ಶೆಟ್ಟರು ಹೊರಟು ನಿಂತಿದ್ದರು. ಸಂಜಯನನ್ನು ನೋಡಿ 'ಬನ್ನಿ ಕಾರಂತರೇ, ನಿಮಗೇ ಕಾಯುತ್ತಿದ್ದೆ' ಅಂದರು.

ಹಾಗೇ ಹೋಗುವಾಗ ಶೆಟ್ಟರ ಜಾಗದ ಕೊನೆಯಲ್ಲಿ ಒಂದು ಒಂದು ಸಣ್ಣ ಗುಡ್ಡವೂ ಅದರ ಸುತ್ತ ಸಣ್ಣ ಕಾಡೂ ಕಂಡಿತು.

ಸಂಜಯ್ 'ಇದೇನು ಶೆಟ್ರೇ, ಬಹಳ ಚೆನ್ನಾಗಿರುವ ಜಾಗ... ಕಾಡು ಅಷ್ಟು ದಪ್ಪವಾಗಿಲ್ಲ. ಗುಡ್ಡ ಅಷ್ಟು ಎತ್ತರವಾಗಿಲ್ಲ. ಸುತ್ತಮುತ್ತ ಅದ್ಭುತ ದೃಶ್ಯ. ಇಲ್ಲಿ ನೋಡಿ, ಈ ಮರದ ಕೆಳಗೆ ಹೂವಿನ ಹಾಸಿಗೆಯೇ ಇದೆ... ಏನು ಪರಿಮಳ' ಅಂದ.

ಶೆಟ್ರು 'ಕಾರಂತರೇ, ಇದು ನನ್ನದೇ ಕುಮ್ಕಿ ಜಾಗ. ಈ ಹೂವು ರೆಂಜಿರು (ಬಕುಲ) ಮರದ್ದು. ಪ್ರತಿದಿನವೂ ಇದು ಇದೇ ತರಹ ಇರ್ತದೆ' ಅಂದರು. 'ಶೆಟ್ರೇ, ಬಹಳ ಒಳ್ಳೆಯದಾಯ್ತು! ಇಲ್ಲಿ ಒಂದು ಕಾಟೇಜ್ ಮಾಡಿದರೆ ಹೇಗೆ? ಜನಕ್ಕೆ ಕಾಡಿನಲ್ಲಿ ಬದುಕುವ ಆಸೆ. ಕಾಟೇಜ್ ಮಾಡಿ ಬಾಡಿಗೆಗೆ ಕೊಟ್ಟರೆ ಸರಿಯಾದೀತು' ಎಂದು ಸಂಜಯ್ ಹೇಳಿದ.

'ಕಾರಂತರೇ, ಏನು ತಮಾಷೆ ಮಾಡ್ತೀರಾ? ಈ ಗುಡ್ಡಕ್ಕೆ ಯಾರು ಬರ್ತಾರೆ ಬಿಡಿ' ಅಂದರು ಶೆಟ್ರು.

ಸಂಜಯ್ ತಿರುಗಿ 'ತಮಾಷೆಯಲ್ಲ ಶೆಟ್ರೇ, ಇಲ್ಲಿ ಕಾಟೇಜ್ ಮಾಡಿ ಹಳ್ಳಿಯ ಊಟ ಕೊಟ್ರೆ ದಿನಕ್ಕೆ ಐದು ಸಾವಿರ ಕೊಟ್ಟು ಬಂದು ಇಲ್ಲಿ ಕೂತುಕೊಳ್ಳುವವರು ಇರ್ತಾರೆ' ಅಂದ.

'ಐದು ಸಾವಿರವ?' ಶೆಟ್ರು ಉದ್ಗರಿಸಿದರು. ಶೆಟ್ರು ಇಷ್ಟು ದೊಡ್ಡ ಜಾಗ ಇಟ್ಟುಕೊಂಡು ವರ್ಷಕ್ಕೆ ಐವತ್ತು ಸಾವಿರವನ್ನೂ ನೋಡಿರಲಿಲ್ಲ. ಈ ಕಾರಂತರು ದಿನಕ್ಕೆ ಐದು ಸಾವಿರ ಹೇಳ್ತಿದ್ದಾರೆ. ನಂಬಲಿಕ್ಕೇ ಆಗಲಿಲ್ಲ ಶೆಟ್ಟರಿಗೆ.

(ಸಶೇಷ)